ಅಸಲ ದಾವಾ ನಂ.689/2024

ಮೆ:: 1ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಗೋಕಾಕ ಇವರ
ನ್ಯಾಯಾಲಯದಲ್ಲಿ ಗೋಕಾಕ

PW1

1] ಶ್ರೀಮತಿ. ಸುಮಿತ್ರಾ ಕೊಂ. ಗೋಪಾಲ ಹುಚ್ಚೇಲಿ

...... ವಾದಿ

// ವಿರುದ್ಧ //

1] ಶ್ರೀ. ಯಲ್ಲಪ್ಪ ತಂದೆ ಭೀಮಶೇಪ್ಪ ಕಮಲಿ @ ಕಂಬಳಿ
ಹಾಗೂ ಇತರರು

...... ಪ್ರತಿವಾದಿಯರು

NOTARY R.R. PASHUPATIMATH Regn. No.Law/ LCL/236/2025 Gokak Rev. Taluka Dist:Belagavi Exp. of Commission:16-01-2031 GOVT OF KARNATAKA

**ಪಿ.ಡಬ್ಲ್ಯೂ-1 ಇವರ ಸಾಕ್ಷಿ ಮುಖ್ಯ ವಿಚಾರಣೆ ಅಫೀಡವ್ಹಿಟ ಮೂಲಕ**

23/7/2026

P/C
for C.V.N.Pa..
Adv for D-6

| | |
|---|---|
| ಹೆಸರು | : ಸುಮಿತ್ರಾ ಹುಚ್ಚೇಲಿ |
| ಗಂಡನ ಹೆಸರು | : ಗೋಪಾಲ ಹುಚ್ಚೇಲಿ |
| ವಯಸ್ಸು | : 38 ವರ್ಷ |
| ಉದ್ಯೋಗ | : ಒಕ್ಕಲುತನ ಮತ್ತು ಮನೆಗೆಲಸ |
| ಸಾಕೀನ | : ಕೊಳವಿ, ತಾ: ಗೋಕಾಕ, ಜಿ: ಬೆಳಗಾವಿ, |

ಈ ಹೊತ್ತು ಮುಕ್ಕಾಂ ಗೋಕಾಕದಲ್ಲಿ ಸತ್ಯ ಪ್ರತಿಜ್ಞೇ ಮೇರೆಗೆ ಬರಕೊಡುವ ಸಾಕ್ಷಿ ಪ್ರಮಾಣ ಪತ್ರ ಏನೆಂದರೆ:-

1. ಈ ಮೇಲೆ ನಮೂದಿಸಿದ ಪ್ರಕರಣದಲ್ಲಿ ನಾನು ವಾದಿ ಇರುತ್ತೇನೆ. ನನಗೆ ಸದರಿ ದಾವೆದ ಬಗ್ಗೆ ಸಂಪೂರ್ಣ ಮಾಹಿತಿ ಇರುವುದರಿಂದ ಸದರಿ ಅಫೀಡವ್ಹಿಟ್‌ನ್ನು ಸಲ್ಲಿಸುವ ಭಾಗ ಬಿದ್ದಿರುತ್ತದೆ.

2. ಸದರಿ ದಾವೆದ ಆಸ್ತಿಯು ಗೋಕಾಕ ತಾಲೂಕ ಪೈಕಿ ಕೊಳವಿ ಗ್ರಾಮದ ಹದ್ದಿಯಲ್ಲಿದ್ದು ಅದರ ರಿ.ಸ.ನಂ.242/8, ಒಟ್ಟು ಕ್ಷೇತ್ರ 00ಎ-32ಗುಂಟೆ-04ಅಣೆ, ಪಿಕೆ 0ಎ-03ಗುಂಟೆ, ಉಳಿದ 0ಎ-29ಗುಂಟೆ-04ಅಣೆ, ಆಕಾರ

NO OF CORRECTION Nil

ಸು ಗೋ ಹುಚ್ಚೇಲಿ

ರೂ.೦.26ಪೈ ದಾವೆದ ಆಸ್ತಿಗೆ ಸಂಬಂಧಿಸಿದಂತೆ ಚಕಬಂದಿ ಈ ಕೆಳಗಿನಂತೆ ಇರುತ್ತದೆ.

ಪೂರ್ವಕ್ಕೆ : ಲಕ್ಕಪ್ಪ ಭೀಮಪ್ಪ ಕಂಬಳಿ ಇವರ ಜಮೀನು
ಪಶ್ಚಿಮಕ್ಕೆ : ಗಾಯರಾಣಾ
ದಕ್ಷಿಣಕ್ಕೆ : ಗಾಂವಠಾಣಾ
ಉತ್ತರಕ್ಕೆ : ಕೊಳವಿ ಗ್ರಾಮ

3. ಮೂಲ ಪುರುಷ ಭೀಮಪ್ಪ ಇತನು ದಿನಾಂಕ:21/07/2023 ರಂದು ಕೊಳವಿ ಗ್ರಾಮದಲ್ಲಿ ಮೃತವಾಗಿರುತ್ತಾನೆ. ಆತನ ಹೆಂಡತಿ ಲಗಮವ್ವ ಪ್ರತಿವಾದಿ ನಂ.2 ಇದ್ದು ಇವರಿಗೆ ನಾಲ್ಕು ಜನ ಹೆಣ್ಣು ಮಕ್ಕಳು ಇರುತ್ತಾರೆ. ನಾನು ಪ್ರತಿವಾದಿ ನಂ.3-ರೇಣುಕಾ, ಪ್ರತಿವಾದಿ ನಂ.4-ಕರೆವ್ವ, ಪ್ರತಿವಾದಿ ನಂ.5-ಶಾಂತವ್ವ, ಪ್ರತಿವಾದಿ ನಂ.1-ಯಲ್ಲಪ್ಪ ಅಂತಾ ಮಗನಿರುತ್ತಾನೆ. ಇವರೆಲ್ಲರು ಭೀಮಪ್ಪನ ಸರಳ ವಾರಸುದಾರರು ಇರುತ್ತಾರೆ.

4. ಪ್ರಸ್ತುತ ದಾವೆದ ಆಸ್ತಿಯು ನನ್ನ ಹಾಗೂ ಪ್ರತಿವಾದಿಯರ ಪಿತ್ರಾರ್ಜಿತ ಒಟ್ಟು ಕುಟುಂಬದ ಆಸ್ತಿ ಇರುತ್ತದೆ. ಭೀಮಪ್ಪ ಇತನ ಜೀವಿತಾವಧಿಯಲ್ಲಿ ನಾನು ಮತ್ತು ಉಳಿದ ಪ್ರತಿವಾದಿ ನಂ.1 ರಿಂದ 5 ರವರು ಭೀಮಪ್ಪ ಇವರೊಂದಿಗೆ ಜಂಟಿಯಾಗಿ ಆಸ್ತಿಯಲ್ಲಿ ಸಾಗುವಳಿ ಮಾಡುತ್ತಾ ಬಂದಿರುತ್ತೇವೆ. ದಾವಾದ ಆಸ್ತಿ ಉತಾರದಲ್ಲಿ ನನ್ನ ತಂದೆಯ ಹೆಸರು ದಾಖಲ ಇರುತ್ತದೆ. ಸದರಿ ಆಸ್ತಿಯನ್ನು ನಾವೆಲ್ಲರೂ ಜಂಟಿಯಾಗಿ ವಹಿವಾಟ ಉಪಭೋಗ ಮಾಡುತ್ತಾ ಬಂದಿರುತ್ತೇವೆ.

5. ದಾವಾದ ಆಸ್ತಿಯು ನೀರಾವರಿ ಜಮೀನು ಇರುತ್ತದೆ. ಸದರಿ ಜಮೀನದಲ್ಲಿ ಕೊಳವೆ ಭಾವಿ, ತೆರೆದ ಭಾವಿ ಇರುತ್ತದೆ. ಸದರಿ ಜಮೀನದಲ್ಲಿ ನಾವು ಕಬ್ಬು, ಗೊಂಜಾಳ, ಮುಂತಾದ ಬೆಳೆಗಳನ್ನು ಬೆಳೆಯುತ್ತಾ ಬಂದಿರುತ್ತೇವೆ. ಹೀಗಾಗಿ ನಮ್ಮ ಮನೆತನದ ಆರ್ಥಿಕ ಪರಿಸ್ಥಿತಿಯು ಮೊದಲಿನಿಂದಲೂ ಚನ್ನಾಗಿ ಇರುತ್ತದೆ. ದಾವಾದ ಆಸ್ತಿಯನ್ನು ಮಾರಾಟ

NOTARY R. PASHUPATIMATH Regn. No.Law/LCL/236/2025 Gokak Rev. Taluka Dist:Belagavi Exp. of Commission:16-01-20.. GOVT. OF KARNA..

NO OF CORRECTION 0/

ಮು ಗ್ರೊ ರೇಣುಕಾ

ಮಾಡುವ ಯಾವುದೇ ಅಡಚಣೆ ಇದ್ದಿರಲಿಲ್ಲ. ಸದರಿ ದಾವೆದ ಆಸ್ತಿಯು ನಮ್ಮ ಹಿರಿಯರ ಆಸ್ತಿ ಇದ್ದು, ಸದರಿ ಆಸ್ತಿಗೆ ನಾವೆಲ್ಲರೂ ಜಂಟಿಯಾಗಿ ವಹಿವಾಟ ಉಪಭೋಗ ಮಾಡುತ್ತಾ ಬಂದಿರುತ್ತೇವೆ.

6. ಮೃತ ಭೀಮಪ್ಪ ನಮ್ಮ ತಂದೆಯು ದುಶ್ಚಟಗಳಿಗೆ ಅಂಟಿಕೊಂಡಿದ್ದರಿಂದ ನಮ್ಮ ಮನೆತನದ ಜವಾಬ್ದಾರಿಯನ್ನು ಸರಿಯಾಗಿ ಮಾಡುತ್ತಿರಲಿಲ್ಲ. ಊರಿನ ಜನರಲ್ಲಿ ಸಾಲವನ್ನು ತನ್ನ ದುಶ್ಚಟಗೋಸ್ಕರ ತೆಗೆದುಕೊಳ್ಳುತ್ತಿದ್ದನು, ಈ ವಿಷಯ ನನಗೆ ಹಾಗೂ ನನ್ನ ಸಹೋದರ, ಸಹೋದರಿಯರಿಗೆ ಗೋತ್ತಾದ ನಂತರ ಊರಿನ ಜನರಿಗೆ ನಮ್ಮ ತಂದೆಗೆ ಸಾಲವನ್ನು ಕೊಡಬೇಡಿ ಅಂತಾ ಹೇಳಿದ್ದೇವು ಆದರೆ ನಮ್ಮ ತಂದೆಯು ತನ್ನ ದುಶ್ಚಟಗಳಿಗೆ ಸಾಲವನ್ನು ಬೇರೆ ಬೇರೆ ಜನರಿಂದ ಬಡ್ಡಿ ರೂಪದಲ್ಲಿ ತೆಗೆದುಕೊಳ್ಳುತ್ತಿದ್ದನು. ನಮಗೆ ಮನೆತನದ ಯಾವುದೇ ಅಡಚಣೆ ಇದ್ದಿರಲಿಲ್ಲ.

7. ಮೃತ ಭೀಮಪ್ಪ ಮರಣಾ ನಂತರ ಆತನ ಜೀವಿತ ಕಾಲದಲ್ಲಿ ಪ್ರತಿವಾದಿ ನಂ.6 ಮಹಾದೇವ ಇತನು ನಮ್ಮ ಮನೆತನಕ್ಕೆ ಯಾವುದೇ ಪ್ರಾಪಂಚಿಕ ಅಡಚಣೆ ಇರದಿದ್ದರೂ ಕೂಡಾ ಖೊಟ್ಟಿ ಖರೀದಿ ಕರಾರ ಪತ್ರ ಮಾಡಿಸಿಕೊಂಡಿರುತ್ತಾನೆ. ಸದರಿ ವಿಷಯವು ನನಗೆ ಮತ್ತು ಸಹೋದರರಿಗೆ ಗೋತ್ತಾಗಿರುತ್ತದೆ. ನಂತರ ಪ್ರತಿವಾದಿ ನಂ.6-ಮಹಾದೇವ ಇತನು ಮೃತ ಭೀಮಪ್ಪ ಹಾಗೂ ಪ್ರತಿವಾದಿ ನಂ.1 ಇವರ ವಿರುದ್ಧ ಏಕ ತರ್ಪೆ ಡಿಕ್ರಿ ಪಡೆದುಕೊಂಡಿರುತ್ತಾನೆ. ನಂತರ ನಾನು ಹಾಗೂ ಉಳಿದವರು 12ನೇ ಸತ್ರ ನ್ಯಾಯಾಧೀಶರು ಬೆಳಗಾವಿ ಪಿಠಾಸೀನ ಗೋಕಾಕ ಇವರಲ್ಲಿ ಅಸಲ ದಾವಾ ನಂ.857/2022 ನೆದ್ದರಲ್ಲಿ ಆದ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದು ಇರುತ್ತದೆ. ಸದರಿ ಮೇಲ್ಮನವಿ ಪುರಸ್ಕರಿಸಿ ಕೆಳ ನ್ಯಾಯಾಲಯಕ್ಕೆ ಪುನಃ ಚೌಕಶಿ ಮಾಡಲು ದಾವೆಯನ್ನು ಮರಳಿ ಕಳುಹಿಸಿದ್ದು ಇರುತ್ತದೆ. ಭೀಮಪ್ಪ ಇತನು ಮೃತನಾದ ನಂತರ ಇತನ ಹೆಣ್ಣು ಮಕ್ಕಳು ಅಂದರೆ ನಾನು ಮತ್ತು ಪ್ರತಿವಾದಿ

NOTARY * R.R. PASHUPATIMATH * Regn. No.Law/ LCL/236/2025 Gokak Rev. Taluka Dist:Belagavi Exp. of Commission:16-01-20.. GOVT. OF KARNATAKA

NO OF CORRECTION

ನಂ.2 ರಿಂದ 5 ವಾರಸುದಾರರಾಗಿ ಅಸಲ ದಾವಾ ನಂ.857/2022 ರಲ್ಲಿ ಬೋರ್ಡ ಮೇಲೆ ಬಂದಿರುತ್ತೇವೆ. ಈಗ ಸದರಿ ದಾವೆ ಚಾಲ್ತಿಯಲ್ಲಿ ಇರುತ್ತದೆ.

8. ಮೈತ ಭೀಮಪ್ಪ ಇತನಿಗೆ ಕರಾರ ಪತ್ರ ಬರೆದುಕೊಡಲು ಹಕ್ಕು ಹಿತಾಸಕ್ತಿ ಇರುವುದಿಲ್ಲ. ಸದರಿ ಕರಾರ ಪತ್ರಕ್ಕೆ ನನ್ನದು ಸಹಿ ಇರುವುದಿಲ್ಲ. ದಿನಾಂಕ:12/07/2019 ರಲ್ಲಿ ಆದ ಕರಾರ ಪತ್ರವು ಖೊಟ್ಟಿ ಇದ್ದು, ಇದು ನಮ್ಮ ಮೇಲೆ ಬಂಧನಕಾರಕ ಆಗುವುದಿಲ್ಲ. ನನಗೆ ಸದರಿ ಖೊಟ್ಟಿ ಕಾಗದದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನನಗೆ ಗೋತ್ತಾದ ಮೇಲೆ ಅಸಲ ದಾವಾ ನಂ.857/2022 ರಲ್ಲಿ ಆದ ಏಕ ತರ್ಪ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದು ಇರುತ್ತದೆ. ಭೀಮಪ್ಪ ಮೈತವಾದ ನಂತರ ಪ್ರತಿವಾದಿ ನಂ.1 & 2 ಇವರು ವರದಿ ಮುಖಾಂತರ ಹೆಸರು ದಾಖಲಿಸಿಕೊಂಡಿರುತ್ತಾರೆ. ಅವರಿಗೆ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ.

9. ದಾವೆದ ಆಸ್ತಿಯು ಒಟ್ಟು ಕುಟುಂಬದ ಹಿರಿಯರ ಆಸ್ತಿಯಾಗಿರುತ್ತದೆ. ದಾವೆದ ಆಸ್ತಿಯಲ್ಲಿ ನನ್ನದು ಹಕ್ಕು ಹಿತಾಸಕ್ತಿ ಇರುತ್ತದೆ. ದಾವೆದ ಆಸ್ತಿಯಲ್ಲಿ ಸರಸ ನಿರಸ ಪಾಲು ಮೈತ ಭೀಮಪ್ಪ ಇತನ ಜೀವಿತ ಕಾಲದಲ್ಲಾಗಲಿ ಆತನ ಮರಣಾ ನಂತರ ಆಗಲಿ ಆಗಿರುವುದಿಲ್ಲ.

NOTARY
R.R. PASHUPATIMATH
Regn. No.Law/ LCL/236/2025
Gokak Rev. Taluka
Dist:Belagavi
Exp. of Commission:16-01-2031
GOVT. OF KARNATAKA

10. ಪ್ರತಿವಾದಿ ನಂ.1 & 2 ಇವರು ದಾವೆದ ಆಸ್ತಿಗಳಿಗೆ ತಮ್ಮ ಹೆಸರು ಇದ್ದುದ್ದನ್ನು ಗೈರ ಫಾಯ್ದೆ ತೆಗೆದುಕೊಂಡು ನಮ್ಮನ್ನು ಹೊರ ಹಾಕಲು ನಮ್ಮ ಪಾಲನ್ನು ಮುಳಗಿಸಬೇಕೆಂಬ ಉದ್ದೇಶ ಹೊಂದಿರುತ್ತಾರೆ. ಹೀಗಾಗಿ ನಾನು ಪ್ರತಿವಾದಿಯರ ಮೇಲೆ ನನ್ನ 1/6 ಹಿಸ್ಸೆ ಪಾಲು ಕೇಳಿ ಈ ದಾವೆ ಮಾಡಿದ್ದು ಇರುತ್ತದೆ.

11. ಪ್ರತಿವಾದಿ ನಂ.6 ಇವರು ಹಾಜರ ಆಗಿ ತನ್ನ ಪರ ಸುಳ್ಳು ವಿಷಯಗಳನ್ನು ಸೃಷ್ಟಿಸಿ ಖೊಟ್ಟಿ ಕೈಫೀಯತನ್ನು ಸಲ್ಲಿಸಿದ್ದು ಇರುತ್ತದೆ.

ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರದಲ್ಲಿ ಮೃತ ಭೀಮಪ್ಪ ಇತನು ಮನೆತನದ ಹಿರಿಯನಿದ್ದು, ಇವನು ತನ್ನ ಮನೆತನದ ಪ್ರಾಪಂಚಿಕ ಅಡಚಣೆಯ ಸಲುವಾಗಿ ದಾವೆದ ಆಸ್ತಿಯನ್ನು ಮಾರಾಟಕ್ಕೆ ತೆಗೆದನು, ಆ ಸಮಯದಲ್ಲಿ ಪ್ರತಿವಾದಿ ನಂ.6-ಮಹಾದೇವ ಇತನು ಖರೀದಿ ತೆಗೆದುಕೊಳ್ಳುವ ಉದ್ದೇಶದಿಂದ ರೂ.6,50,000/-ಗಳ ಪೈಕಿ ರೂ.6,00,000/-ಗಳನ್ನು ತೆಗೆದುಕೊಂಡು ದಿ:12/07/2019 ರಂದು ಪ್ರತಿವಾದಿ ನಂ.6 ಇತನಿಗೆ ಕರಾರ ಪತ್ರವನ್ನು ಬರೆದುಕೊಟ್ಟಿದ್ದು, ಪ್ರತಿವಾದಿ ನಂ.1 ಇತನು ಸಹಿ ಮಾಡಿರುತ್ತಾನೆ. ಸದರಿ ಅಸಲ ದಾವಾ ನಂ.857/2022 ನೆದ್ದನ್ನು ದಾಖಲ ಮಾಡಿದ್ದು, ಸದರಿ ದಾವೆ ಡಿಕ್ರಿಯಾಗಿದ್ದು ಇರುತ್ತದೆ. ನಂತರ ದರಖಾಸ್ತ ನಂ.104/2023 ನೆದ್ದು ದಾಖಲ ಮಾಡಿದ್ದು ಇರುತ್ತದೆ. ನಾನು ಮತ್ತು ಪ್ರತಿವಾದಿ ನಂ.1 ರಿಂದ 5 ಇವರು ಮಿಲಾಪಿಯಾಗಿ ಜಿಲ್ಲಾ ನ್ಯಾಯಾಲಯದಲ್ಲಿ ಅಪೀಲ ಮಾಡಿರುತ್ತೇವೆ. ನಂತರ ಸದರಿ ಮೇಲ್ಮನವಿ ಪುರಸ್ಕರಿಸಿದಾಗ ಇ.ಪಿ.ನಂ.104/2023 ನೆದ್ದನ್ನು ಹಿಂದಕ್ಕೆ ಪಡೆದುಕೊಂಡಿದ್ದು ಇರುತ್ತದೆ ಎಂಬ ವಿಷಯವನ್ನು ನಾನು ಬಲವಾಗಿ ಅಲ್ಲಗಳೆಯುತ್ತೇನೆ.

12. ಕೊಳವಿ ಗ್ರಾಮದ ರಿ.ಸ.ನಂ.251/3, ಕ್ಷೇತ್ರ 04ಎ-12ಗುಂಟೆ, ಇದರ ಪೈಕಿ 01ಎ-20ಗುಂಟೆ ಸದರಿ ಆಸ್ತಿಯು ನಮ್ಮ ಮನೆತನಕ್ಕೆ ಯಾವುದೇ ರೀತಿ ಸಂಬಂಧ ಇರುವುದಿಲ್ಲ, ಆದ್ದರಿಂದ ನಾನು ಈ ದಾವೆದಲ್ಲಿ ಸದರಿ ಆಸ್ತಿಯನ್ನು ಸೇರ್ಪಡೆ ಮಾಡಿರುವುದಿಲ್ಲ.

13. ಕೊಳವಿ ಗ್ರಾಮದ ರಿ.ಸ.ನಂ.355, ಕ್ಷೇತ್ರ 00ಎ-20ಗುಂಟೆ-08ಅಣೆ ನನ್ನ ತಂದೆ ಭೀಮಪ್ಪ ಇತನು ಗಂಗೋತ್ರಿ ಅಡಿವೆಪ್ಪ ಶಿಂಗಾಡಿ ಹಾಗೂ ಮಾಯವ್ವ ವಿಠ್ಠಲ ಶಿಂಗಾಡಿ ಇವರಿಗೆ ದಿನಾಂಕ:09/03/2023 ರಂದು ರೂ.2,56,000/-ಗಳನ್ನು ತೆಗೆದುಕೊಂಡು ಬಿಟ್ಟುಕೊಟ್ಟಿರುತ್ತಾರೆ. ಸದರಿ

NOTARY
R.R. PASHUPATIMATH
Regn. No.Law/ LCL/236/2025
Gokak Rev. Taluka Dist:Belagavi
Exp. of Commission:16-01-2031
GOVT. OF KARNATAKA

ಶು ಗೊ ಪು ಲಕ್ಷ್ಮಿ

NO OF CORRECTION

ಆಸ್ತಿಯನ್ನು ಈ ದಾವೆದಲ್ಲಿ ಸೇರ್ಪಡೆ ಮಾಡಿರುವುದಿಲ್ಲ ಅಂತಾ ಬರೆದ ವಿಷಯವನ್ನು ನಾನು ಬಲವಾಗಿ ಅಲ್ಲಗಳೆಯುತ್ತೇನೆ.

14. ಸದರಿ ಕರಾರ ಪತ್ರವನ್ನು ಮೈತ ಭೀಮಪ್ಪ ಇತನು ತನ್ನ ಮನೆತನದ ಪ್ರಾಪಂಚಿಕ ಅಡಚನೆಯ ಸಲುವಾಗಿ ಮಾರಾಟ ಮಾಡಿದ್ದು ಮತ್ತು ಮೇಲೆ ಹೇಳಿದ ಆಸ್ತಿಗಳನ್ನು ಉದ್ದೇಶಪೂರ್ವಕವಾಗಿ ಸೇರ್ಪಡೆ ಮಾಡಿರುವುದಿಲ್ಲ ಅಂತಾ ಬರೆದ ವಿಷಯಗಳನ್ನು ನಾನು ಬಲವಾಗಿ ಅಲ್ಲಗಳೆಯುತ್ತೇನೆ.

15. ನಾನು ಈಗಾಗಲೆ ಸದರಿ ದಾವೆಗೆ ಸಂಬಂಧಪಟ್ಟಂತೆ ಕಾಗದ ಪತ್ರಗಳನ್ನು ಹಾಜರ ಪಡಿಸಿದ್ದು ಅದನ್ನು ಮೆ:: ರವರು ನನ್ನ ಪರವಾಗಿ ನಿಶಾನೆ ಪಿ.1 ರಿಂದ ಪಿ.__ ಅಂತಾ ಗುರ್ತಿಸಬೇಕಾಗಿ ವಿನಂತಿ.

ಆದ ಕಾರಣ ಮೆ:: ರವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ನಾನು ಮಾಡಿದ ಸದರಿ ದಾವೆಯನ್ನು ನನ್ನ ಮಾಗಣಿ ಪ್ರಕಾರ ಪುರಸ್ಕರಿಸಿ ಡಿಕ್ರಿ ಮಾಡವುದಾಗಬೇಕು ಅಂತಾ ಮಾಡಿದ ಸಾಕ್ಷಿ ಅಫಿಡವ್ಹಿಟ.

ಸ್ಥಳ: ಗೋಕಾಕ
ದಿನಾಂಕ:23-07-2026

ಸು ಗೊ ಪುಬಲ್ಲ
ಶಪಥವಿಧಿಗಾರ

ಈ ಮೇಲೆ ಬರೆದ ಯಾವತ್ತು ಮಜಕೂರುಗಳು ನನ್ನ ಸ್ವಂತ ಮಾಹಿತಿ ಪ್ರಕಾರ ಹೇಳಿ ಬರೆಯಿಸಿದ್ದು, ಅದನ್ನು ಓದಿಸಿ, ತಿಳಿದುಕೊಂಡು ಸಹಿ ಮಾಡಿರುತ್ತೇನೆ ಮತ್ತು ಅವು ಸಂಪೂರ್ಣ ನಿಜವಿರುತ್ತದೆ.

ಸು ಗೊ ಪುಬಲ್ಲ
ಶಪಥವಿಧಿಗಾರ

ಸ್ಥಳ: ಗೋಕಾಕ
ದಿನಾಂಕ:23-07-2026
"ಸದರಿಯವರ ಪರಿಚಯವಿದೆ"

[ಎಮ್. ಎಸ್. ಬೈರುಗೋಳ]
ವಕೀಲರು – ಗೋಕಾಕ

NOTARY * R. R. PASHUPATIMATH * Regn. No.Law/LCL/236/2025 * Gokak Rev. Taluka Dist.Belagavi * Exp. of Commission:16-01-2031 * GOVT. OF KARNATAKA

SWORN TO BEFORE ME
R. R. PASHUPATIMATH
B. Com., LL.B. (Spl.)
ADVOCATE & NOTARY, GOKAK